ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 158 ಟಿಎನ್ಆರ್ 2020 (2)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:22-04-2021

## ಆದೇಶ

ಆದೇಶ ಸಂಖ್ಯೆ:ಕಂಇ 158 ಟಿಎನ್ಆರ್ 2020, ದಿನಾಂಕ:20-04-2021ರಲ್ಲಿ ವಿಪತ್ತು ನಿರ್ವಹಣಾ ಅಧಿನಿಯಮ, 2005ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ರಾಜ್ಯದಲ್ಲಿ ಕೋವಿಡ್-19 ಪ್ರಸರಣ ತಡೆಗಟ್ಟಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ತತ್ಪರಿಣಾಮವಾಗಿ ಸದರಿ ಮಾರ್ಗಸೂಚಿಗಳಿಗೆ ಕೆಲವು ನಿರ್ದಿಷ್ಟ ಕಾರ್ಯಚಟುವಟಿಕೆಗಳನ್ನು ಸೇರ್ಪಡೆಗೊಳಿಸಲು ಹಾಗೂ ನಿಷೇಧಿಸಲು ಸೇರ್ಪಡೆ ಆದೇಶ ಕಂಇ 158 ಟಿಎನ್ಆರ್ 2020, ದಿನಾಂಕ:21-04-2021 ಮತ್ತು ಸ್ಪಷ್ಟೀಕರಣ ಆದೇಶವನ್ನು ಹೊರಡಿಸಲಾಗಿದೆ.

ಹಲವಾರು ವಲಯಗಳಿಂದ ವಾರದ ದಿನಗಳಿಗೆ (ಸೋಮವಾರದಿಂದ ಶುಕ್ರವಾರದವರೆಗೆ) ಈ ಮಾರ್ಗಸೂಚಿಗಳು ಅನ್ವಯವಾಗುವುದರ ಬಗ್ಗೆ, ಮತ್ತು ಖಂಡ (4)ರ ವಾಣಿಜ್ಯ ಮತ್ತು ಖಾಸಗಿ ಸಂಸ್ಥೆಗಳಲ್ಲಿನ ಅಂಗಡಿಗಳ ಕಾರ್ಯ ನಿರ್ವಹಣೆ ಕುರಿತಂತೆ ಸಾರ್ವಜನಿಕರು ಮತ್ತು ಮಾಲೀಕರಲ್ಲಿ ಗೊಂದಲ ಉಂಟಾಗಿದ್ದು, ಸ್ಪಷ್ಟೀಕರಣಗಳನ್ನು ಕೋರಲಾಗಿದೆ.

ಆದುದರಿಂದ, ಸೋಮವಾರ ಬೆಳಿಗ್ಗೆ 6-00 ಗಂಟೆಯಿಂದ ಶುಕ್ರವಾರ ರಾತ್ರಿ 9-00 ಗಂಟೆಯವರೆಗೆ ಅನ್ವಯವಾಗುವ ಮಾರ್ಗಸೂಚಿಗಳಲ್ಲಿನ ಅಂಗಡಿಗಳ ಕುರಿತಾಗಿ ಈ ಕೆಳಕಂಡಂತೆ ಸ್ಪಷ್ಟೀಕರಿಸಿದೆ.

| | |
|---|---|
| **ವಾಣಿಜ್ಯ ಮತ್ತು ಖಾಸಗಿ ಸಂಸ್ಥೆಗಳು** | ಎ. ನ್ಯಾಯಬೆಲೆ ಅಂಗಡಿಗಳು (ಪಿಡಿಎಸ್), ಕಿರಾಣಿ ಅಂಗಡಿಗಳು, ದಿನಸಿ, ಹಣ್ಣು ಮತ್ತು ತರಕಾರಿಗಳು, ಡೈರಿ ಮತ್ತು ಹಾಲಿನ ಬೂತುಗಳು, ಮಾಂಸ ಮತ್ತು ಮೀನು, ಪಶು ಆಹಾರದ ಅಂಗಡಿಗಳಿಗೆ ಅನುಮತಿಸಲಾಗಿದೆ.<br><br>ಬಿ. ಸಗಟು ತರಕಾರಿ/ ಹಣ್ಣು/ ಹೂವು ಮಾರುಕಟ್ಟೆಗಳಿಗೆ ಬಯಲು ಪ್ರದೇಶ/ ಆಟದ ಮೈದಾನಗಳಲ್ಲಿ ಮಾರಾಟ ಮಾಡಲು ಕೋವಿಡ್ ಸಮುಚಿತ ವರ್ತನೆಯನ್ನು (COVID Appropriate Behaviour - CAB) ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು ಅನುಮತಿಸಿದೆ. ಸ್ಥಳಾಂತರ ಪ್ರಕ್ರಿಯೆಗಳನ್ನು ಏಪ್ರಿಲ್ 23 ರೊಳಗೆ ಪೂರ್ಣಗೊಳಿಸತಕ್ಕದ್ದು.<br><br>ಸಿ. ರೆಸ್ಟೋರೆಂಟ್‌ಗಳು ಮತ್ತು ಉಪಹಾರ ಗೃಹಗಳಿಗೆ ಪಾರ್ಸೆಲ್ ಸೇವೆಗೆ ಮಾತ್ರ ಅನುಮತಿಸಿದೆ.<br><br>ಡಿ. ವಸತಿ ಸೌಕರ್ಯದ ಹೋಟೆಲ್‌ಗಳಿಗೆ ಅತಿಥಿ ಸೇವೆ ನೀಡಲು ಮಾತ್ರವೇ ಅನುಮತಿಸಿದೆ.<br><br>ಇ. ಪ್ರತ್ಯೇಕ ಮದ್ಯದಂಗಡಿಗಳು ಮತ್ತು ಔಟ್‌ಲೆಟ್‌ಗಳು/ಬಾರ್‌ಗಳು ಮತ್ತು ರೆಸ್ಟೋರೆಂಟ್‌ಗಳಿಗೆ ಪಾರ್ಸಲ್ ನೀಡುವುದಕ್ಕೆ ಮಾತ್ರ ಅನುಮತಿಸಿದೆ.<br><br>ಎಫ್. ಎಲ್ಲಾ ಆಹಾರ ಸಂಸ್ಕರಣೆ ಮತ್ತು ಅದಕ್ಕೆ ಸಂಬಂಧಿತ ಕೈಗಾರಿಕೆಗಳು ಕಾರ್ಯನಿರ್ವಹಿಸಲು ಅನುಮತಿಸಿದೆ.<br><br>ಜಿ. ಬ್ಯಾಂಕ್‌ಗಳು, ವಿಮಾ ಕಚೇರಿಗಳು ಮತ್ತು ಎಟಿಎಂಗಳಿಗೆ ಅನುಮತಿಸಿದೆ. |

| | |
|---|---|
| | ಹೆಚ್. ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಿಗೆ ಅನುಮತಿಸಿದೆ.<br><br>ಐ. ಇ-ಕಾಮರ್ಸ್ ಸೇವೆಗಳ ಮುಖಾಂತರ ಎಲ್ಲಾ ವಸ್ತುಗಳ ವಿತರಣೆಗೆ ಅನುಮತಿಸಿದೆ.<br><br>ಜೆ. ಭಾರತದ ಭದ್ರತೆಗಳು ಮತ್ತು ವಿನಿಮಯ ಮಂಡಳಿಯು ಅಧಿಸೂಚಿಸಿದ ಬಂಡವಾಳ ಮತ್ತು ಸಾಲ ಮಾರುಕಟ್ಟೆ ಸೇವೆಗಳಿಗೆ ಅನುಮತಿಸಿದೆ.<br><br>ಕೆ. ಶೈತ್ಯಾಗಾರಗಳು ಮತ್ತು ಉಗ್ರಾಣ ಸೇವೆಗಳಿಗೆ ಅನುಮತಿಸಿದೆ.<br><br>ಎಲ್. ಖಾಸಗಿ ಭದ್ರತಾ ಸೇವೆಗಳಿಗೆ ಅನುಮತಿಸಿದೆ.<br><br>ಎಮ್. ಕ್ಷೌರದಂಗಡಿಗಳು/ ಸಲೂನ್/ ಬ್ಯೂಟಿ ಪಾರ್ಲರ್‌ಗಳಿಗೆ ಕೋವಿಡ್ ಸಮುಚಿತ ವರ್ತನೆಯನ್ನು (CAB) ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹೊರಡಿಸಿದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕಾರ್ಯನಿರ್ವಹಿಸಲು ಅನುಮತಿಸಿದೆ.<br><br>ಎನ್. ನಿರ್ಮಾಣ ಸಾಮಗ್ರಿಗಳಿಗೆ ಸಂಬಂಧಿಸಿದ ಎಲ್ಲಾ ಅಂಗಡಿಗಳು.<br><br>**ಮೇಲೆ ಸೂಚಿಸಲಾದ ಅಂಶಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅಂಗಡಿಗಳು/ವಾಣಿಜ್ಯ/ ಖಾಸಗಿ ಕಾರ್ಯಸಂಸ್ಥೆಗಳನ್ನು ಮುಚ್ಚತಕ್ಕದ್ದು.** |
| **ಕಂಟೈನ್‌ಮೆಂಟ್ ವಲಯದ ಹೊರಗಿನ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು** | ಕಂಟೈನ್‌ಮೆಂಟ್ ವಲಯಗಳ ಹೊರಗಿನ ಎಲ್ಲಾ **ಕೃಷಿ (ಬೇಸಾಯ) / ಸಂಬಂಧಿತ ಚಟುವಟಿಕೆಗಳಿಗೆ** ಪೂರಕವಾಗಿ ಅಗತ್ಯವಿರುವ ಸಾಮಾಗ್ರಿಗಳನ್ನು ಪೂರೈಸುವ ಅಂಗಡಿಗಳು ಮತ್ತು ದಾಸ್ತಾನು ಮಳಿಗೆಗಳಿಗೆ / ಕೃಷಿ ಯಂತ್ರದಾರಿಕೆಗಳಿಗೆ ಅನುಮತಿ ನೀಡಲಾಗಿದೆ. |

ಈ ಸ್ಪಷ್ಟೀಕರಣವನ್ನು ಮುಖ್ಯ ಆಯುಕ್ತರು, ಬಿಬಿಎಂಪಿ, ಪೊಲೀಸ್ ಆಯುಕ್ತರು, ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು, ಇಲಾಖೆಗಳ ಮುಖ್ಯಸ್ಥರು ಹಾಗೂ ಸಂಬಂಧಿಸಿದ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಆದೇಶಿಸಿದೆ.

**(ಎನ್. ಮಂಜುನಾಥ ಪ್ರಸಾದ್)** 22/4/2021
ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ
ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ
ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.